ಸಿ.ಸಿ ನಂ.1700 /2025 ಡಿ.ಡಬ್ಲೂ-1

ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ. ಕೆ.ಎನ್ .ಎಸ್ ವಕೀಲರಿಂದ ಪಿರ್ಯಾಧಿ ಪರ

ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ. ನಿಪಿ-1 ನನ್ನ ಖಾತೆಗೆ ಸಂಬಂದಪಟ್ಟಿರುತ್ತದೆ ಮತ್ತು ನಿಪಿ-1 ಎ ನನ್ನ ಸಹಿ ಯಾಗಿರುತ್ತದೆ ಎಂದರೆ ಸರಿ. ನಿಪಿ5 ರಲ್ಲಿರುವ ಸಹಿ ನನ್ನದಾಗಿರುತ್ತದೆ ಎಂದರೆ ಸರಿ. ಈ ಕೇಸು ಸಲ್ಲಿಸುವ ಪೂರ್ವದಲ್ಲಿ ಪಿರ್ಯಾಧಿ ನಮಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಒಟ್ಟಿಗೆ ಇರುತ್ತೇವೆ ಎಂದರೆ ಸರಿ. ನನ್ನ ಮಗ ಸಾಗರದ ಆಸ್ಪತ್ರೆಯಲ್ಲಿ ಸುಮಾರು 4 ವರುಷಗಳಿಂದ ಡಿ ದರ್ಜೆ ನೌಕರನಾಗಿ ಕೆಲಸ ಮಾಡುತ್ತಿದ್ದಾನೆ.

ಪಿರ್ಯಾಧಿ ಮತ್ತು ನನ್ನ ಮಗ ಸ್ನೇಹಿತರು ಎಂದರೆ ಇದ್ದರಂತೆ ನನಗೆ ಹೆಚ್ಚಾಗಿ ಗೊತ್ತಿಲ್ಲ ಎನ್ನುವರು. ಪಿರ್ಯಾಧಿ ಬ್ಲಡ್ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ಮಗ ಶಿವಮೊಗ್ಗದಲ್ಲಿ ಏನೂ ವ್ಯವಹಾರ ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. ನನ್ನ ಮಗನ ಬಗ್ಗೆ ಶಿವಮೊಗ್ಗದ ದಿನಪತ್ರಿಕೆಗಳಲ್ಲಿ ಯೂ ಟ್ಯೂಬ್ ನಲ್ಲಿ ಕೆಲವು ಮಾಹಿತಿ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಸೈಟು ಖರೀದಿ ಮಾಡಲು ಶಿವಮೊಗ್ಗಕ್ಕೆ ಹೋಗಿರುತ್ತಾನೆ

ಎಂದರೆ ಗೊತ್ತಿಲ್ಲ ಎನ್ನುವರು. ನನ್ನ ಮಗನಿಗೆ ನಿವೇಶನ ಕೊಡಿಸುತ್ತೇನೆಂದು ಹೇಳಿ ವಿಶ್ವನಾಥ ರಾಮಚಂದ್ರ ಮತ್ತು ಇನ್ನಿತರೆ ನಾಲ್ಕು ಜನರು ಸೇರಿ ಹಂತ ಹಂತವಾಗಿ ರೂ 19,80,000-00 ಪಡೆದು ಮೋಸ ಮಾಡಿರುತ್ತಾರೆ ಎಂದು ದಿನ ಪತ್ರಿಕೆಗಳಲ್ಲಿ ಬಂದಿರುತ್ತದೆ ಎಂದು ಶಿವಮೊಗ್ಗದ ಲೈವ್ಸ ನ್ಯೂಸ್ ನಲ್ಲಿ ಬೇರೆ ಬೇರೆ ದಿನಾಂಕಗಳಲ್ಲಿ ವರದಿ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಶಿವಮೊಗ್ಗದಲ್ಲಿ ನಿವೇಶನ ಖರೀದಿ ಮಾಡಲು ನಾನು ಮತ್ತು ಮಗ ಹೋಗಿ ಪಿರ್ಯಾಧಿ ಬಳಿ ಒಟ್ಟಾಗಿ ರೂ 820000-00 ವನ್ನು ಸಾಲವಾಗಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಸಾಲ ಮರುಪಾವತಿ ಮಾಡಲು ನಾನು ನಿಪಿ-1 ನ್ನು ಮತ್ತು ನನ್ನ ಮಗ ಆತನಿಗೆ ಸೇರಿದ ಚೆಕ್ ನ್ನು ನೀಡಿರುತ್ತಾನೆ ಎಂದರೆ ಸರಿಯಲ್ಲ. ಬ್ಯಾಂಕಿಗೆ ನಿಪಿ-1 ನ್ನು ಹಾಜರುಪಡಿಸಿದಾಗ ನನಗೆ ಮೇಸೇಜ್ ಬಂದಿರುತ್ತದೆ ಎಂದರೆ ಸರಿ. ಸದರಿ ಖಾತೆಯಲ್ಲಿ ಹಣ ಇಲ್ಲ ಎಂದು ಹೇಳಿ ಬಂದ ನಂತರ ನಾವು ವಕೀಲರ ಮೂಲಕ ದಿನಾಂಕ 30-12-2023 ರಂದು ನೋಟೀಸು ನೀಡಿರುತ್ತೇವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ